# ಟಾಲಿವುಡ್ ತಲ್ಲಣ



ಕಾಜಲ್ ಅಗರ್‌ವಾಲ್

ಡ್ರಗ್ಸ್ ಹಗರಣದ ಸುದ್ದಿಗಳು ಒಂದೊಂದಾಗಿ ಹೊರಗೆ ಬರುತ್ತಿರುವಂತೆಯೇ ಟಾಲಿವುಡ್ ತತ್ತರಿಸಿದೆ. ತೆಲುಗು ಚಿತ್ರರಂಗದ ಬಹುದೊಡ್ಡ ಹೆಸರುಗಳ ಜತೆಗೆ ಈ ಹಗರಣ ತಳುಕು ಹಾಕಿಕೊಂಡಿದೆ ಎನ್ನುವ ಅನುಮಾನ ಬಲವಾಗುತ್ತಿದೆ. ಸೆಲೆಬ್ರಿಟಿಗಳು ಎಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದರೂ, ಹಗರಣವೊಂದರಲ್ಲಿ ಹೆಸರು ಬಂದರೆ ಆವರೆಗೆ ಮಾಡಿದ್ದೆಲ್ಲ ವ್ಯರ್ಥವಾಯಿತೆಂದೇ ಲೆಕ್ಕ. ಎಲ್‌ಎಸ್‌ಡಿ ಮತ್ತು ಇತರ ಡ್ರಗ್ಸ್‌ಗಳ ಬಳಕೆ ಮತ್ತು ಮಾರಾಟದ ದೊಡ್ಡ ಜಾಲವೊಂದನ್ನು ಪತ್ತೆ ಹಚ್ಚಿರುವ ವಿಶೇಷ ತನಿಖಾ ತಂಡ, ಆ ಜಾಲದ ಜತೆಗೆ ತೆಲುಗು ಚಿತ್ರರಂಗದ ಹಲವು ಪ್ರಮುಖರಿಗೆ ಇರುವ ನಂಟನ್ನು ಕೆದಕುತ್ತಿದೆ. ಈ ಅಕ್ರಮ ಜಾಲದ 'ಕಿಂಗ್‌ಪಿನ್' ಕಾಲ್ವಿನ್ ಮಸ್ಕರೇನ್ಹಸ್. ಆತನನ್ನು ಬಂಧಿಸಿ ಮೊಬೈಲ್‌ನ ಸಂಪರ್ಕಗಳನ್ನು ಪತ್ತೆ ಹಚ್ಚಿದರೆ ಒಂದೊಂದಾಗಿ ತೆಲುಗು ಚಿತ್ರರಂಗದ ಪ್ರಮುಖರ ಹೆಸರುಗಳು ಸಿಕ್ಕಿವೆ.

ಈಗಾಗಲೆ ನಟ ರವಿತೇಜ, ತರುಣ್, ಪಿ.ನವದೀಪ್, ಖಳನಟ ಸುಬ್ಬರಾಜು, ನಿರ್ದೇಶಕ ಪೂರಿ ಜಗನ್ನಾಥ್, ಕಲಾನಿರ್ದೇಶಕ ಧರ್ಮಾರಾವ್ (ಚಿನ್ನಾ), ಛಾಯಾಗ್ರಾಹಕ ಶ್ಯಾಮ್ ನಾಯ್ಡು, ನಂದು ಮುಂತಾದವರನ್ನು ಠಾಣೆಗೆ ಕರೆಸಿ ಹಲವಾರು ಗಂಟೆಗಳ ಕಾಲ ತನಿಖೆ ನಡೆಸಲಾಗಿದೆ. ನಟಿ ಮುಮೈತ್ ಖಾನ್ ಕೂಡಾ ತನಿಖೆಗೆ ಒಳಪಟ್ಟಿದ್ದಾಳೆ. ಜತೆಗೆ ನಟಿ ಕಾಜಲ್ ಅಗರ್‌ವಾಲ್ ಮ್ಯಾನೇಜರ್ ಜಾನಿ ಜೋಸೆಫ್‌ನನ್ನು ಬಂಧಿಸಿ ಆತನ ಬಳಿಯಲ್ಲಿದ್ದ ಗಾಂಜಾ ಸಂಗ್ರಹವನ್ನು ವಶಪಡಿಸಲಾಗಿದೆ. ನಟಿ ಚಾರ್ಮಿ ಕೌರ್ ಳನ್ನು ತನಿಖೆ ನಡೆಸಿದ್ದೇ ಅಲ್ಲದೆ ಆಕೆಯ ರಕ್ತದ ಸ್ಯಾಂಪಲ್‌ಅನ್ನು ಸಂಗ್ರಹಿಸಿದ್ದು ಇದೀಗ ದೊಡ್ಡ ವಿವಾದವಾಗಿದೆ. ಪೊಲೀಸರ ಈ ಕ್ರಮವನ್ನು ಪ್ರಶ್ನಿಸಿ ಚಾರ್ಮಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾಳೆ.

ಟಾಲಿವುಡ್‌ನ ಡ್ರಗ್ಸ್ ಮಾಫಿಯಾದ ಸಂಪರ್ಕ ಬಾಲಿವುಡ್‌ಗೂ ಹಬ್ಬಿದೆ ಎನ್ನಲಾಗುತ್ತಿದೆ. ಈ ಜಾಲದ 12 ಮಂದಿ ಬಂಧಿತರಲ್ಲಿ ಒಬ್ಬನಾದ ಜಾಕ್ ಅಲಿಯಾಸ್ ಜೀಶಾನ್ ಅಲಿ ಖಾನ್, ಬಾಲಿವುಡ್‌ನಲ್ಲಿ ಹಲವು ಗಣ್ಯರ ಸಂಪರ್ಕದಲ್ಲಿದ್ದಾನಂತೆ. ಈ ಹಿಂದೆ ನಟ ಸಂಜಯ್ ದತ್ ಹೀಗೆ ಡ್ರಗ್ಸ್ ಮಾಫಿಯಾದ ಜತೆಗೆ ಸಂಪರ್ಕ ಇಟ್ಟುಕೊಂಡಿರುವುದರ ಬಗ್ಗೆ ಪುಕಾರು ಹಬ್ಬಿತ್ತು. ಈ ಸಲವೂ ಕೆಲವು ಖ್ಯಾತನಾಮ ನಟರು ಪ್ರಕರಣದಲ್ಲಿ ಸಿಕ್ಕಿಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ. ಕ್ರಿಮಿನಲ್ ದಂಡಸಂಹಿತೆಯ ಪ್ರಕಾರ, ಯಾವುದೇ ವ್ಯಕ್ತಿ ಮನೆಯಲ್ಲಿ ಡ್ರಗ್ಸ್ ಇಟ್ಟುಕೊಳ್ಳುವುದೂ, ಇನ್ನೊಬ್ಬರಿಗೆ ಸೇವಿಸುವಂತೆ ಪ್ರೇರೇಪಿಸುವುದೂ ಅಪರಾಧ ಆಗಿರುವುದರಿಂದ ಟಾಲಿವುಡ್‌ನ ಹಲವು ನಟ– ನಟಿಯರು, ತಂತ್ರಜ್ಞರು ಈ ತನಿಖೆಯ ಬಗ್ಗೆ ತಲ್ಲಣಗೊಂಡಿದ್ದಾರೆ ಎನ್ನುವುದು ಅಂತರಂಗದಲ್ಲಿ ಕೇಳಿ ಬರುತ್ತಿರುವ ಮಾತು.

■ ಬಿಂದು



ಚಾರ್ಮಿ ಕೌರ್



ರವಿತೇಜ